Pd. 335
T.P-2

51st Year of Publication ✶ SATYAVADI Daily, MYSORE 4

Reg No B G 155 — ಶ್ರೀ — 13 - 7 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ಥಾಪಕರು : ಅಶಮಾಸಿ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ — ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ — [2 ಪೈಸೆ

ಜಿಲ್ಲಾಗಳ ಪುನರ್ವಿಂಗಡನೆಗೆ ನ್ಯಾಯಾಂಗ ಇಲಾಖೆಯ ವಿರೋಧ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಆಟದ ರೈಲು

ಬೆಂಗಳೂರು— ಕಬ್ಬನ್ ಪಾರ್ಕಿನಲ್ಲಿ ಮಕ್ಕಳಿಗಾಗಿ ರೈಲು ಹಾಕಲಾಗುತ್ತದೆ; ನವೆಂಬರು 14 ರಂದು ಉದ್ಘಾಟಿಸಲಾಗುವುದು — ಮಕ್ಕಳ ಕಲ್ಯಾಣ ಸಮಿತಿಯಿಂದದ ಇದಕ್ಕೆ ರೂ. 60000 ಡಾ ನೇಷನ್ ಕೊಡಲಾಗಿದೆ.

ಗರ್ಭನಿರೋಧ ಮಾತ್ರೆಗಳು — ಎಚ್ಚೆರಿಕೆ

ಲಂಡನ್— ಗಭನಿರೋಧ ಮಾತ್ರೆ ಸೇವನೆಯಿಂದ ಯುವತಿಯರಲ್ಲಿ ರಕ್ತ ಮುದ್ದೆ ಗಟ್ಟಿನಿಂದಾಗುವ ಸಾವುಗೆ ಅವಕಾಶವಿದೆಯೆಂದು ಲ್ಯಾನ್ಸೆಟ್ ವೈದ್ಯಕೀಯ ಸಪ್ತಾಹಕ ಎಚ್ಚೆರಿಸಿದೆ.

ಅಂಚೇಚೀಟಿ ಬಿಡುಗಡೆ

ನವದೆಹಲಿ— ಇದೇ ಜುಲೈ 17 ರಂದು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು 'ಗೋಧಿ ಬೆಳೆಯಲ್ಲಿ ಕ್ರಾಂತಿ – 1968" ಎಂ ಸ್ಮಾರಕ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವರು — ಪಸ್ತುತ ವರ್ಷಗಳಲ್ಲಿ (67–68) ದೇಶದ ಗೋಧಿ ಬೆಳೆಯ ಉತ್ಪನ್ನವು ಸುಮಾರು 16 ದಶಲಕ್ಷ ಟನ್ ಆಗುವುದು ಎಂದು ಅಂಡಾಜು ಮಾಡಲಾಗಿದೆ.

✶

ತಂತೀ ಕಳ್ಳರ ಗುಂಪು

ಮೈಸೂರು— ತಂತೀ ಅಂಚೆ ಇಲಾಖೆಗೆ ತಂತಿ ಕಳುವು ಸಂಬಂಧದಲ್ಲಿ ದೊಡ್ಡ ತಂಡವನ್ನು ಬಂಧಿಸಲಾಗಿದೆ.

✶

ಅಂಚೆ ಮುಷ್ಕರದಿಂದ

ತ್ರಿವೇಂದ್ರಂ— ರಾಜ್ಯಾದ್ಯಂತ 3 ದಿನಗಳು ನಡೆದ ಆರ್ ಎಂ ಎಸ್ ನೌಕರರ ಮುಷ್ಕರ 3 ದಿನಗಳ ನಂತರ ನಿನ್ನೆ ನಿಂತಿತು — ರಾಜ್ಯದ ಕಾರ್ಮಿಕ ಮಂತ್ರಿಯವರು ನಡೆಸಿದ ಸಮ್ಮೇಳನದಲ್ಲಿ ಅವರ ಕೇಳಿಕೆ ಬಗ್ಗೆ ವ್ಯವಸ್ಥೆಯಾಯಿತು — ಮುಷ್ಕರದಿಂದ 15 ಲಕ್ಷ ಪೋಸ್ಟಲ್ ಪದಾರ್ಥಗಳು ರಾಜ್ಯದ ವಿವಿಧ ಅಂಚೇ ಕಚೇರಿಗಳಲ್ಲಿ ರಾಶಿ ಬಿದ್ದಿವೆ.

✶

ವಿರುದ್ಧ ಬೋಧನೆಗೆ ಶಿಕ್ಷೆ

ಬಾರ್ಸ್ಟ್— ಮಿಲಿಟರಿ ಸೇವೆಗೆ ಸೇರದಂತೆ ಯುವಕರಿಗೆ ಬೋಧಿಸಿದ ಆಪಾದನೆಗಾಗಿ 65 ವರ್ಷದ ಡಾಕ್ಟರು ಡಾ || ಬೆಂಜಿಮನ್ ಸ್ಪಾಕ್‌ರಿಗೆ 2 ವರ್ಷ ಜೈಲು ವಾಸ ವಿಧಿಸಲಾಯಿತು.

ಮಕ್ಕಳ ನಿಧಿಯಿಂದ ಭಾರತಕ್ಕೆ

ನವದೆಹಲಿ— ವಿಶ್ವಸಂಸ್ಥೆ ಮಕ್ಕಳ ನಿಧಿಯಿಂದ ಭಾರತವು ಈ ವರ್ಷ 5 ಮಿಲಿಯ ಡಾಲರು ನೆರವು ಪಡೆಯಲಿದೆ ಎಂದು ಪ್ರಕಟವಾಗಿದೆ.

✶

ಶ್ರೀಮನ್ಮಹಾರಾಜರವರು

ಬೆಂಗಳೂರು— ವಿದೇಶ ಪ್ರವಾಸದಲ್ಲಿದ್ದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ವೊಡೆಯರವರು ನಿನ್ನೆ ಬೆಂಗಳೂರಿಗೆ ಆಗಮಿಸಿದರು.

ಜಿಲ್ಲಾಗಳ ಪುನರ್ವಿಂಗಡನೆ

ಬೆಂಗಳೂರು— ಮಂತ್ರಿ ನಾಗಗೌಡರ ಜಿಲ್ಲಾಗಳ ಪುನರ್ವಿಂಗಡನೆ ಸಲಹೆಗೆ ತಾವು ವೈಯುಕ್ತಿಕವಾಗಿ ಒಪ್ಪಿದರೂ, ಅದು ಬಹಳ ಖರ್ಚು ಹಿಡಿಯುವುದರಿಂದ, ಸಧ್ಯಃ ಅದನ್ನು ನ್ಯಾಯಾಂಗ ಇಲಖೆ ವಿರೋಧಿಸಿದೆಯೆಂದು ಕಂದಾಯ ಮತ್ತು ನ್ಯಾಯಾಂಗ ಮಂತ್ರಿ ಶ್ರೀ ಕೌಜಲಗಿ ಹೇಳಿರುವರು.

ಗೋಹತ್ಯ ನಿರೋಧ

ಗೋಹತ್ಯನಿರೋಧ ವಿಷಯದಲ್ಲಿ ಸಮಿತಿಯು ಎಲ್ಲ ಮುಖ್ಯಮಂತ್ರಿಗಳಿಗೂ ಬರೆದಿದ್ದಕ್ಕೆ, ರಾಜಸ್ಥಾನ, ಉತ್ತರ ಪ್ರದೇಶ, ಗುಜರಾತ್, ಪಂಜಾಬ್ ಮತ್ತ ಹರಯಾಣಾಗಳಿಂದ ಸಂಪೂರ್ಣ ಗೋಹತ್ಯ ನಿರೋಧಕ್ಕೆ ಕೇಳಿಕೆ ಬಂದಿದೆ — ಮದರಾಸು, ಪಶ್ಚಿಮ ಬಂಗಾಳ ಮತ್ತು ಕೇರಳ ನಿಶೇಧವನ್ನು ವಿರೋಧಿಸಿವೆ — ಇತರವು ಅಪೂರ್ಣ ನಿರೋಧ ಬಯಸಿವೆ — ಜಮ್ಮು ಕಾಶ್ಮೀರದ ಉತ್ತರ ನಿರೀಕ್ಷಣೆಯಲ್ಲಿದೆ.



— — ವ್ಯವಸಾಯ ಚಿತ್ರ — —

— ತುಳು ಗಾದೆಗಳು —

ನರಿಯ ತಂತ್ರ ಕೋಳಿಗೇನು ಗೊತ್ತು ?

ನರಕದಲ್ಲಿ ಮಿತ್ರನಿಲ್ಲ, ಸ್ವರ್ಗದಲ್ಲಿ ಶತ್ರುವಿಲ್ಲ.

ಲೆಕ್ಕ ತಿಳಿಯದವನು ಬಡ್ಡಿಗೆ ಹಣ ಕೊಟ್ಟಂತೆ.

ನ್ಯಾಯಕ್ಕೆ ನೀತಿಯ ಬಲ, ಅನ್ಯಾಯಕ್ಕೆ ದಂಡದ ಬಲ.

ನರಕದಲ್ಲಿ ಭೇದಭಾವವಿಲ್ಲ, ಸ್ವರ್ಗದಲ್ಲಿ ರೋಗರುಜಿನವಿಲ್ಲ.

ಹುಲಿ ಹೆಬ್ಬುಲಿಗಳಿಗೆ ಹೆದರದವಳು ತಟ್ಟಿಪಟಕ್ಕೆ ಹೆದರಿಯಾಳೇ ?

ಯಮನೊಡನೆ ನೆವನ ನಡೆಯದು, ದೇವನಿಕಡನೆ ಸುಳ್ಳು ನಡೆಯದು.

ನೂರು ಗಂಡನ್ನು ತೂಕಬಹುದು, ಹತ್ತು ಹೆಣ್ಣನ್ನು ಸಾಕುವುದು ಕಷ್ಟ.

ಎರಡು ಕೊಳ್ಳಿಗಳು ಒಟ್ಟಾಗದೆ ಬೆಂಕಿ ಹತ್ತದು, ಸಿಡುಕರಿಬ್ಬರು ಒಟ್ಟುಕೂಡ ಜಗಳವಾಗದು.

ಹತ್ತರಲ್ಲಿ ಮುಕ್ಕಳಾಟಿಕೆ, ಇಪ್ಪತ್ತರಲ್ಲಿ ಚೆಲುವು, ಮೂವತ್ತರಲ್ಲಿ ದುಗುಡು, ನಲ್ವತ್ತರಲ್ಲಿ ಮಧ್ಯಮ. ಐವತ್ತರಲ್ಲಿ ಮಾತುಗಾರಿಗೆ, ಅರವತ್ತರಲ್ಲಿ ವಾದ, ಎಪ್ಪತ್ತರಲ್ಲಿ ನಿಸ್ಸಾರ, ಎಂಭತ್ತರಲ್ಲಿ ಊರುಗೋಲು, ತೊಂಭತ್ತರಲ್ಲಿ ಶಯನ, ನೂರರಲ್ಲಿ ಪಯಣ.

Golden Jubilee of 'Satyavadi'

The golden jubilee of the 'Satyavadi' is to be celebrated in July.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is wellknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

SHAKTI SUDHA

A SuperbTonic

ವುಡ್‌ಲಾಂಡ್ಸ್ ಜನಭರಿತ 3 ನೇ ವಾರ

ಅಮೋಘ ಆರಂಭ

— ಮನೋಹರ ಈಸ್ಮ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈದಾಬಾನು, ಪ್ರೇಂ ಭೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೇರ ಅಮೋಘ 2 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ :— ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಾರ್ಥ ಬೆಂಬಲ ನೀಡಿ :

ಶ್ರೀಶಾರದಾ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು

ಮಹಾಸನ್ನಿಧಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋಸಂರಕ್ಷಣೆ ಪಶುಸಂವರ್ಧನೆ, ತಳಿಸುಧಾರಣೆ, ಪಶುವೈದ್ಯ,

ಪಶುಸಂರಕ್ಷಣೆ ಎಲ್ಲೆಲ್ಲ ಪ್ರಚಾರ ಹರಡಬೇಕಿದೆ ; ವಾರ್ಷಿಕ ಚಂದಾ 50 ಪೈಸೆ

— ಗೋಸಂರಕ್ಷಣೆ ವ್ಯವಸಾಯಕ್ಕಿಂತಲೂ ಏನಂತೆ —

ಗೋಸಂರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ

ಪೂರ್ಣಸಾಹಾಯ್ಯಕವಾಗಿ ಸ್ವೀಕರಿಸಲಾಗುವುದು

ಚಂದಾವಾಣಿಯಿದೆ ಕಳೆದಿರುವವರು ಇವರಲ್ಲಿ ಚಂದಾ ವಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಂಜುಂಡಯ್ಯ, ಶ್ರೀ ಪಿ.ಎನ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಜಿ ಡಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತಸಂಸಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ,ಹೊಂಗನೂರು

ಗೋಸಂರಕ್ಷಣ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋಸಂರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮತ್ತು ಸಂವರ್ಧನೆಯಲ್ಲಿ ಅಭಿಮಾನಿಗಳು ಕೈಜೋಡಿಸಿ ಸಹಕರಿಸಬೇಕು

Edited, Printed & Published by Dharmaprachara Niyata M S Krishna Rao (Proprietor) at the Satyavadi Press Chamarajapuram, Mysore 4